ಅಧ್ಯಕ್ಷರು : (ಶ್ರೀ ವಿ.ಎಸ್. ಕೌಜಲಗಿ) ಅವರು ಪೀಠವನ್ನು ಅಲಂಕರಿಸಿದ್ದರು.

ವಿಷಯ :- ಗೃಹಮಂಡಳಿಯ ಮಾಜೀ ಅಧ್ಯಕ್ಷರ ಮೇಲೆ ಮಾಡಿರುವ ಆರೋಪಗಳಿಗೆ ಹೇಳಿಕೆ.

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ) :- ಸನ್ಮಾನ್ಯ ಅಧ್ಯಕ್ಷರೆ, ನಾನು ಈ ಸದನದಲ್ಲಿ ಇಲ್ಲದಿದ್ದಾಗ ಮಾನ್ಯ ಯಡಿಯೂರಪ್ಪನವರು ಮತ್ತು ಅವರ ಸ್ನೇಹಿತರು ನನ್ನ ಮೇಲೆ ನೇರವಾದ ಆಪಾದನೆಯನ್ನು ಮಾಡಿದ್ದಾರೆ. ಅವರು ಏಕೆ ಮಾಡಿದ್ದಾರೆ ಏನು ಮಾಡಿದ್ದಾರೆ ಎಂಬುದು ನನಗೆ ಗೊತ್ತಿದೆ. ಅವರ ರೀತಿಯಲ್ಲಿಯೇ ನಾನು ವರ್ತನೆ ಮಾಡುವುದಕ್ಕೆ ಹೋಗುವುದಿಲ್ಲ. ಏಕೆಂದರೆ ನಾವು ಇಲ್ಲಿ ಜವಾಬ್ದಾರಿಯಿಂದ ಕೆಲಸವನ್ನು ನಿರ್ವಹಿಸಬೇಕಾಗಿದೆ. ಏಕೆಂದರೆ ಒಬ್ಬ ಸದನದ ಸದಸ್ಯರು ಇನ್ನೊಬ್ಬ ಸದನದ ಸದಸ್ಯರ ಮೇಲೆ ಆಪಾದನೆಯನ್ನು ಮಾಡಬೇಕಾದರೆ ಪೂರ್ವಭಾವಿಯಾಗಿ ತಮಗೆ ನೋಟೀಸನ್ನು ಕೊಡಬೇಕಾಗುತ್ತದೆ ಮತ್ತು ಅದರ ಪ್ರತಿಯನ್ನು ಸಂಬಂಧಪಟ್ಟ ಸದಸ್ಯರಿಗೆ ಕಳಿಸಿಕೊಡಬೇಕಾಗುತ್ತದೆ, ಆನಂತರ ಬೇಕಾದರೆ ಅವರಿಗೆ ಈ ವಿಷಯವನ್ನು ಎತ್ತಲು ಅವಕಾಶ ಕೊಡಬಹುದು. ಆದರೆ ಏನೂ ಇಲ್ಲದ ಏಕಾಏಕಿಯಾಗಿ ವಿಷಯವನ್ನು ಎತ್ತಿದರೆ ತಾವು ಅದಕ್ಕೆ ಅನುಮತಿಯನ್ನು ನಿರಾಕರಿಸಬೇಕು. ಅವರು ಯಾವುದೇ ನಿಯಮಾವಳಿಯನ್ನೂ ಪಾಲನೆ ಮಾಡದೆ ವಿಷಯವನ್ನು ಪ್ರಸ್ತಾಪ ಮಾಡಿ ಗೊಂದಲವನ್ನು ಸೃಷ್ಟಿ ಮಾಡಿದ್ದಾರೆ. ತಾವು ಈ ಸದನದ ಸದಸ್ಯರೆಲ್ಲರ ಹಕ್ಕುಬಾಧ್ಯತೆಯನ್ನು ರಕ್ಷಣೆ ಮಾಡತಕ್ಕ ಸ್ಥಾನದಲ್ಲಿ ಇದ್ದೀರಿ. ಆದ್ದರಿಂದ ತಾವು ನಮ್ಮ ರಕ್ಷಣೆಯನ್ನು ಮಾಡಬೇಕು. ಅವರು ಮಾಡಿರತಕ್ಕ ಆಪಾದನೆಯನ್ನು ಈಗ ಕಡತದಿಂದ ತೆಗೆಸಿಹಾಕಬೇಕಾಗುತ್ತದೆ. ಅವರು ವಿಷಯವನ್ನು ಚರ್ಚೆ ಮಾಡಲು ಅಧಿಕಾರ ಇದೆ. ಆ ನಿಯಮಾವಳಿಯ ಪ್ರಕಾರ ಬರಲಿ. ಆಗ ಚರ್ಚೆ ಮಾಡೋಣ, ನಾನು ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಬಯಸುತ್ತೇನೆ. ಹಿಂದೆ ವಿರೋಧ ಪಕ್ಷದ ನಾಯಕರು ಮತ್ತು ಅವರ ಸ್ನೇಹಿತರು ಸೇರಿ ಈ ಸದನದಲ್ಲಿ ಗೃಹಮಂಡಳಿಯ ಬಗ್ಗೆ ಮತ್ತು ಆಶ್ರಯ ಯೋಜನೆಗೆ ಸಂಬಂಧಪಟ್ಟಂತೆ ಮುಂಗಡವಾಗಿ ಹಣವನ್ನು ಕೊಟ್ಟಿರುವ ಬಗ್ಗೆ ಏನು ಚರ್ಚೆ ಮಾಡಿದರು ಆ ಕಾಲದಲ್ಲಿ ನಾನು ಇಲ್ಲಿಗೆಬಂದು ಉತ್ತರವನ್ನು ಹೇಳಿದ್ದೇನೆ. ಆ ವಿಷಯ ಈಗ ತನಿಖೆಯಲ್ಲಿರತಕ್ಕ ಸಂದರ್ಭದಲ್ಲಿ ಅನೇಕ ಸದಸ್ಯರು ಮತ್ತು ನಮ್ಮ ಮಾನ್ಯ ಸಿಂಧ್ಯರವರು ಇಲ್ಲಿ ಪ್ರಾಸಂಗಿಕವಾಗಿ ಪ್ರಸ್ತಾಪ ಮಾಡಿದರು. ನಾನು ಎಲ್ಲಾ ರೀತಿಯಿಂದಲೂ ಕೂಡ ಬಂದು ಮಾತನಾಡಬಹುದು. ಆದರೆ ನಾನು ಮಾತನಾಡಲು ಹೋಗುವುದಿಲ್ಲ. ಏಕೆ ಮಾತನಾಡಲು ಹೋಗುವುದಿಲ್ಲವೆಂದರೆ ಇವೆಲ್ಲಾ ನಡೆದಂಥ ಸಂದರ್ಭದಲ್ಲಿ ನಾನು ಗೃಹಮಂಡಳಿಯ ಅಧ್ಯಕ್ಷನಾಗಿದ್ದೆ, ಮತ್ತು ಆ ವಿಷಯ ಇವತ್ತು ತನಿಖಾ ಮಾಡತಕ್ಕಂಥ ಏಜೆನ್ಸಿಯವರಿಗೆ ಇದು ಪೂರಕವೂ ಆಗಿರಬಹುದು ಭಾದಕವೂ ಆಗಬಹುದು. ಇಲ್ಲಿ ಒಂದು ಪಕ್ಷದ ಸರ್ಕಾರವಿದೆ, ನಾವು ಒಂದುಪಕ್ಷದಲ್ಲಿ ಇದ್ದೇವೆ. ಇವತ್ತು ಆ ವಿಷಯವನ್ನು ತೀರ್ಮಾನ ಮಾಡಿ ತನಿಖೆಗೆ ಒಳಪಡಿಸಲಾಗಿದೆ. ಇವತ್ತು ತಾವು ನನ್ನಬಗ್ಗೆ ಮಾಡಿರುವ ಆರೋಪದಿಂದ ನನಗೆ ಸಿಟ್ಟು, ಉದ್ವೇಗ, ವ್ಯಸನಾಗಬಹುದು, ಆದರೆ ನಾನೇನು ಮೂಕ ಪ್ರಾಣಿಯಲ್ಲ; ನಾವೂ ಕೂಡ ಜನ ಸಂಘಟನೆ ಮಾಡಿ, ಜನ ಹೋರಾಟದಿಂದಲೇ ಇಲ್ಲಿಗೆ ಬಂದಿದ್ದೇವೆ. ಇಲ್ಲಿ ಮಾತನಾಡತಕ್ಕದ್ದು, ಪ್ರತಿವಾದನೆ ಮಾಡತಕ್ಕದ್ದು ಮತ್ತು ನಮ್ಮನ್ನು ರಕ್ಷಣೆ ಮಾಡತಕ್ಕದ್ದು ಅಷ್ಟೂ ಸಹ ನಮಗೆ ಗೊತ್ತಿದೆ . ಆ ರೀತಿ ನಮಗೆ ಗೊತ್ತಿದೆ ಎಂದು ನಾನು ಬೇಕಾಬಿಟ್ಟಿ ಮಾತನಾಡಲು ಬರುವುದಿಲ್ಲ. ಇದರ ಬಗ್ಗೆ ಎಷ್ಟೊಂದು ವಿಷಯ ನನಗೆ ಗೊತ್ತಿದೆ ಅವೆಲ್ಲವನ್ನೂ ಸಹ ಹೇಳುವುದಕ್ಕಾಗುತ್ತದೆಯೇ? ಸಿಓಡಿ ಯವರು ನನಗೆ ಎರಡು ಸಾರಿ ಕರೆಯಿಸಿದ್ದರು, ನಾನು ಅಲ್ಲಿಗೆ ಎರಡುಸಾರಿ ಹೋಗಿ ಇದರ ಬಗ್ಗೆ ವಿವರವಾಗಿ ಏನೇನು ಹೇಳಬೇಕು ಅದನ್ನೆಲ್ಲಾ ಹೇಳಿ ಬಂದಿದ್ದೇನೆ. ಆದರೆ ನಾನು ಅಲ್ಲಿ ಹೇಳಿರತಕ್ಕದನ್ನೆಲ್ಲಾ ಇಲ್ಲಿ ಹೇಳುವುದಕ್ಕಾಗುತ್ತದೆಯೇ? ಆ ರೀತಿ ಹೇಳಿದರೆ ಆ ತನಿಖೆಯ ಹಣೇಬರಹ ಏನಾಗುತ್ತದೆ? ಆ ತನಿಖೆಗೆ ಏನು ಪ್ರಾಮುಖ್ಯತೆ ಬರುತ್ತದೆ? ಇಲ್ಲಿ ಚರ್ಚೆಮಾಡಿ ಅನಾವಶ್ಯಕವಾಗಿ ಒಬ್ಬರನ್ನು ಆಪಾದನೆ ಮಾಡುವುದರಿಂದ, ಅದನ್ನೇ ಸತ್ಯವೆಂದು ಆ ತನಿಖಾಧಿಕಾರಿಗಳು ಒಪ್ಪಿಕೊಂಡರೆ ಯಾವನೋ ಒಬ್ಬನನ್ನು ನೇಣುಗಂಬಕ್ಕೆ ಅವಕಾಶವಾಗುತ್ತದೆ. ಇದನ್ನು ಮಾಡಬೇಕೆಂದಿದ್ದೀರಾ? ಇಲ್ಲಿರತಕ್ಕ ತಕ್ಕಡಿ ನ್ಯಾಯವನ್ನು ಎತ್ತಿ ಹಿಡಿಯಬೇಕೆಂದು

ಹೇಳುತ್ತಿದೆ. ಅಲ್ಲಿ ತನಿಖೆ ಇಲ್ಲದೇ ಇದ್ದರೆ ಇಲ್ಲಿ ತಾವು ಎಷ್ಟು ಬೇಕಾದರೂ ಚರ್ಚೆಮಾಡಿ. ನಾನೂ ಉತ್ತರ ಕೊಡುವುದಕ್ಕೆ ತಯಾರಿದ್ದೇನೆ. ಆದರೆ ತನಿಖೆ ನಡೆಯುತ್ತಿರುವ ಕಾಲದಲ್ಲಿ ಇಲ್ಲಿ ಈ ವಿಷಯವನ್ನು ಪ್ರಸ್ತಾಪ ಮಾಡಿದರೆ ಆ ತನಿಖೆಗೆ ಏನು ಗಂಭೀರತೆ ಬರುತ್ತದೆ? ಏನು ಪ್ರಾಮುಖ್ಯತೆ ಬರುತ್ತದೆ? ನಾವು ರೂಲ್ ಆಫ್ ಲಾ ಎಂದು ಹೇಳುತ್ತೇವೆ. ರೂಲ್ ಆಫ್ ಲಾ ಏನು ಹೇಳುತ್ತದೆ? ಪತ್ರಿಕೆಯಲ್ಲಿ ಏನು ಇರುತ್ತದೆ ಅದನ್ನೇ ಹೇಳುತ್ತಾರೆ. ಅಪಾದನೆಯನ್ನು ಮಾಡಿದ್ದಾರೆ. ಆಪಾದನೆ ಮಾಡಿ ಅದನ್ನು ಪೋಲೀಸ್ ಠಾಣೆಗೆ ತಲುಪಿಸಿದ್ದಾರೆಂದು ಹೇಳಿದ್ದಾರೆ. ಅದು ಫಿರ್ಯಾದು. ಅದರ ಬಗ್ಗೆ ಇನ್ನೂ ಇನ್ವೆಸ್ಟಿಗೇಷನ್ ಆಗಿಲ್ಲ. ಕ್ರಿಮಿನಲ್ ಎಂದರೆ ಯಾರು? ಅಪರಾಧಿ. ನಾನು ಮಾನ್ಯ ದೇಶಪಾಂಡೆಯವರಿಗೆ ಕೇಳುತ್ತೇನೆ. ಕ್ರಿಮಿನಲ್ ಪ್ರೊಸೀಜರ್ ಕೋಡ್ ಪ್ರಕಾರವೇ ಒಬ್ಬ ಅಪರಾಧಿ ಮಾಡಿರತಕ್ಕ ಸ್ಟೇಟ್‌ಮೆಂಟ್, is it admissible? Information leading to the discovery is admissible and not information. ಯಾರಾದರೂ ಅದನ್ನೇ ನಿಜ ಎಂದು ತಿಳಿದುಕೊಂಡರೆ ಆ ರೀತಿ ಫಿರ್ಯಾದು ಕೊಪತಕ್ಕವರು ಇಂಥ ಅಪರಾಧಿ ಹೀಗೆ ಹೇಳಿದ್ದಾನೆ; ಆದ್ದರಿಂದ ಇದು ನಿಜ ಅಂತ ಹೇಳುತ್ತಾನೆಯೆ? ಡೈರಿ ಇಟ್ಟುಕೊಂಡಿರುತ್ತಾರೆ. ಇಂಟಾರಾಗೇಷನ್ ಇನ್‌ಫರ್ಮೇಷನ್ ಸಿಕ್ಕಿದರೆ that should be used for discovery. In the course of discovery, evidence ಸಿಕ್ಕಿದರೆ that can be used as evidence not as a statement, not as an information. ನಾನು ಒಂದು ಮಾತನ್ನು ಹೇಳುತ್ತೇನೆ. ವಿರೋಧಪಕ್ಷದವರು 10 ಲಕ್ಷ ರೂಪಾಯಿಗಳನ್ನು ತೆಗೆದುಕೊಂಡಿದ್ದಾರೆಂದು ನಾನು ಹೇಳುತ್ತೇನೆ. ನೀವು ಹೇಗೆ ಹೇಳಿದಿರಿ ಎಂದು ಅವರೂ ಒಂದು ಕಂಪ್ಲೇಂಟ್ ಕೊಡುತ್ತಾರೆ. ಅದು ಅಲ್ಲಿ ಆಗಿ ಹೋಗುತ್ತದೆಯೇ?

ಶ್ರೀ ಆರ್. ದಯಾನಂದರಾವ್ :- ಮಾನ್ಯ ಅಧ್ಯಕ್ಷರೇ, ಮಾನ್ಯ ಯಡಿಯೂರಪ್ಪನವರು ಸ್ಮಗ್ಲಿಂಗ್‌ನ್ನೂ ಮಾಡುತ್ತಿದ್ದಾರೆಂದು ನಾವು ಹೇಳಬಹುದು.

ಅಧ್ಯಕ್ಷರು :- ತಾವು ಕುಳಿತುಕೊಳ್ಳಿ.

ಶ್ರೀ ಆರ್. ದಯಾನಂದರಾವ್ :- ಯಾವು ಯಾವುದನ್ನೋ ಇಲ್ಲಿ ತಂದು ಮಾತನಾಡುವುದು ಸರಿಯಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ :- ಮಾನ್ಯ ಅಧ್ಯಕ್ಷರೇ ಮಾನ್ಯ ಕಾಗೋಡು ತಿಮ್ಮಪ್ಪನವರು ನನ್ನ ಆಪ್ತ ಸ್ನೇಹಿತರು. ಆ ದಿವಸ ನಾನು ಏನು ಪ್ರಸ್ತಾಪ ಮಾಡಿದ್ದೇನೆ...

(ಗೊಂದಲ)

ಅಧ್ಯಕ್ಷರು :- ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ :- ಮಾನ್ಯ ಅಧ್ಯಕ್ಷರೇ, ಹಿರಿಯ ಸದಸ್ಯರಾದ ಮಾನ್ಯ ಕಾಗೋಡು ತಿಮ್ಮಪ್ಪನವರಿಗೆ ಒಂದು ಮಾತನ್ನು ಹೇಳಬಯಸುತ್ತೇನೆ. ಇವತ್ತು ನಿಲುವಳಿ ಸೂಚನೆಯ ಪ್ರಕಾರ ಒಂದು ನೋಟೀಸನ್ನು ಕೊಟ್ಟು ಸಿಓಡಿ ವರದಿಯ ಪ್ರಕಾರ ಏನು ವಿಚಾರ ಇದೆ ಅದರ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ನನಗೆ ಅವಕಾಶವನ್ನು ಮಾಡಿಕೊಡಿ ಎಂದು ಪ್ರಿಲಿಮಿನರಿ ಸಬ್ಮಿಷನ್‌ಗೆ ನಾನು ಹೋಗುತ್ತಿದ್ದೆ. ಮಾನ್ಯ ಕಾಗೋಡು ತಿಮ್ಮಪ್ಪನವರ ಮೇಲೆ ವೈಯಕ್ತಿಕವಾಗಿ ಪ್ರಸ್ತಾಪ ಮಾಡುತ್ತಿಲ್ಲ. ಗೃಹ ಮಂಡಲಿಯ ಅಧ್ಯಕ್ಷರಾಗಿ ಅವರ ಮೇಲೆ ಏನು ಜವಾಬ್ದಾರಿ ಇತ್ತು ಪತ್ರಿಕೆಗಳಲ್ಲಿ ವಿತಕ್ಕೆ ಈ ರೀತಿ ಬಂದಿದೆ, ಇದರ ಬಗ್ಗೆ ಸಿಓಡಿ ಯ ಇಂಟೆರೀಂ ರಿಪೋರ್ಟ್ ಏನು ಬಂದಿದೆ ಅದನ್ನು ಸದನದ ಮುಂದಿಡಬೇಕು, ಅದರ ಬಗ್ಗೆ ಡಿಮ್ಯಾಂಡ್ ಮಾಡುತ್ತಿದ್ದೇನೆ. ಅದು ತನಿಖೆ ಆಗಬೇಕು ಎಂಬ ಹಿನ್ನೆಲೆಯಲ್ಲಿ ಅವತ್ತಿನ ಗೃಹಮಂಡಲಿಯ ಅಧ್ಯಕ್ಷರು ಯಾರಿದ್ದರು ಅವರೇ ಈ ಎಲ್ಲಾ ಅವ್ಯವಹಾರದ ಉದ್ಭವಕ್ಕೆ ಮೂಲ ಕಾರಣವಾಗಿರುವುದರಿಂದ ಅವರನ್ನು ಬಂಧಿಸಬೇಕೆಂಬ ಪ್ರಸ್ತಾಪವನ್ನು ನಾನು ಮಾಡಿದ್ದೇನೆ. ಇದರ ಬಗ್ಗೆ ಚರ್ಚೆಗೆ ಅವಕಾಶ ಮಾಡಿಕೊಡಿ ಎಂದು

ಕೇಳಿದ್ದೇನೆ. ಯಾವ ರೀತಿ ಗೃಹಮಂಡಲಿಯ ಅಧ್ಯಕ್ಷರು ಅವತ್ತಿನಿಂದ ಇವತ್ತಿನವರೆಗೆ ಅಂದರ ಸುಮಾರು 2 ವರ್ಷಗಳಲ್ಲಿ ನೂರಾರುಕೋಟಿ ರೂಪಾಯಿಗಳು ಲೂಟಿಯಾಗಿದೆ ಎಂಬ ಬಗ್ಗೆ ದಾಖಲಾತಿಗಳನ್ನು ನಾನು ಈ ಸದನದಲ್ಲಿ ಕೊಡುತ್ತೇನೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ :- ನಾಗರಾಜು ಎನ್ನುವವರು ರಿಪೋರ್ಟ್ ಕೊಟ್ಟಿದ್ದಾರೆ. ರಿಪೋರ್ಟ್‌ನಲ್ಲಿದೆ, ಇದು ಚರ್ಚೆಯಾಗಲಿ. ನಾನು ಇದನ್ನು ಪ್ರೂವ್ ಮಾಡುತ್ತೇನೆ. ಇಲ್ಲದಿದ್ದರೆ ನಾನು ಈ ಸದನದಿಂದ ಹೊರಗೆ ಹೋಗುತ್ತೇನೆ. ಇವತ್ತು ಅವರ ಎರಡೂವರೆ ವರ್ಷದ ಆಡಳಿತದ ಬಗ್ಗೆ ಸಮಗ್ರವಾಗಿ ಚರ್ಚೆಗೆ ಅವಕಾಶ ಮಾಡಿಕೊಡಿ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ :- ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ, ಇದಕ್ಕೆ ಮೂಲ ಕಾರಣವಾದಂಥ ಅಂದಿನ ಗೃಹ ಮಂಡಲಿಯ ಅಧ್ಯಕ್ಷರನ್ನು ಬಂಧನ ಮಾಡಬೇಕೆಂದು ಹೇಳುವಂಥ ಅಧಿಕಾರ ನನಗಿದೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ :- ಇದರ ಬಗ್ಗೆ ಚರ್ಚೆಯಾಗಬೇಕಾಗಿದೆ. ತಾವು ಅವಕಾಶ ಮಾಡಿಕೊಡಬೇಕು. ನಾವು ಇದನ್ನು ಚರ್ಚೆ ಮಾಡುವುದಕ್ಕೆ ಅವಕಾಶ ಕೊಡದಿದ್ದರೆ ಜನರಿಗೆ ದ್ರೋಹ ಮಾಡಿದಂತಾಗುತ್ತದೆ. ವಿರೋಧಪಕ್ಷದಲ್ಲಿ ನಾವು ಇಲ್ಲಿ ಕುಳಿತುಕೊಂಡು ರಾಜ್ಯದ ಜನತೆಗೆ ದ್ರೋಹ ಮಾಡಿದಂತಾಗುತ್ತದೆ. ನನ್ನ ಕರ್ತವ್ಯವನ್ನು ನಾನು ಮಾಡಿದ್ದೇನೆ.

ಅಧ್ಯಕ್ಷರು :- ನಾನು ಈಗಾಗಲೇ ಈ ವಿಷಯದ ಬಗ್ಗೆ ಹೇಳಿದ್ದೇನೆ. ಅದನ್ನು ನಾನು ಮುಂದುವರಿಸುವುದಕ್ಕೆ ಸಿದ್ಧವಿಲ್ಲ. ಈಗ ವೋಟಾರ್ ವೆಹಿಕಲ್ ಬಿಲ್ಲನ್ನು ನಾನು ತೆಗದುಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ :- ದಯವಿಟ್ಟು ನಮಗೆ ಅವಕಾಶವನ್ನು ಮಾಡಿಕೊಡಬೇಕು.

ಅಧ್ಯಕ್ಷರು :- ನಾನು ತಮ್ಮ ಕಾಗದಪತ್ರಗಳನ್ನೆಲ್ಲಾ ತರಿಸಿ ನೋಡಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ :- ನಾನು ಈ ಸರ್ಕಾರದ ನೀತಿಯನ್ನು ಪ್ರತಿಭಟನೆ ಮಾಡಿ ಧರಣಿ ಮಾಡುತ್ತೇನೆ.

(ಈ ಸಂದರ್ಭದಲ್ಲಿ ಮಾನ್ಯ ಬಿ.ಎಸ್. ಯಡಿಯೂರಪ್ಪನವರು ತಮ್ಮ ಸ್ಥಾನದಿಂದ ಎದ್ದು ಸದನದ ಬಾವಿಗೆ ಧಾವಿಸುವರು)

ಶಾಸನ ರಚನಾ ಕಾರ್ಯಕಲಾಪಗಳು

ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕ 1993

(ಪರ್ಯಾಲೋಚನಾ ಪ್ರಸ್ತಾವ)

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು) :- ಮಾನ್ಯ ಅಧ್ಯಕ್ಷರೇ, '' ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕ 1993ನ್ನು ಪರ್ಯಾಲೋಚನೆಗೆ ತೆಗೆದುಕೊಳ್ಳಬೇಕೆಂದು ವಿನಂತಿಸುತ್ತೇನೆ.